ಬಹಳಷ್ಟನ್ನು ಕಲಿಸಿತು. ಜಗತ್ತನ್ನು ತಮ್ಮ ಶ್ರವಣೇಂದ್ರಿಯದಿಂದ, ಸ್ಪರ್ಶೇಂದ್ರಿಯದಿಂದ, ನಾಸಿಕ ನಾಲಿಗೆಗಳಿಂದ ಪರಿಚಯಿಸಿಕೊಂಡರು. ವಿಶ್ವವೆಲ್ಲವೂ ನಾದಮಯವೆನಿಸಿತ್ತು. ಯಾವುದೇ ವ್ಯಕ್ತಿಯನ್ನು, ವಸ್ತುವನ್ನು ಧ್ವನಿಯಿಂದ ಗುರುತಿಸುವ ಕೌಶಲ ಮೆಲ್ಲನೆ ಕರಗತವಾಗುತ್ತಿತ್ತು. ತಮ್ಮ ದೃಷ್ಟಿಹೀನತೆಯ ಮಿತಿಯನ್ನು ಸ್ವೀಕರಿಸಿದರು. ಆದರೆ ಕಣ್ಣುಗಳಿಲ್ಲದೆಯೂ ಜಗತ್ತನ್ನು 'ನೋಡಬಹುದು', ಮುಟ್ಟಬಹುದು, ಆಘ್ರಾಣಿಸಬಹುದು, ಕೇಳಬಹುದು, ಸವಿಯಬಹುದು ಎಂದು ಮನಗಂಡರು. ಸುಮ್ಮನೆ ಮನೆಯಲ್ಲಿ ಕುಳಿತುಕೊಳ್ಳದ ಈ ಹುಡುಗನಿಗೆ, ಪ್ರತಿದಿನವೂ ಹೊರಜಗತ್ತು ಹೊಸದೇನನ್ನೋ ಆತನ ಅನುಭವದ ಬುಟ್ಟಿಗೆ ಹಾಕುತ್ತಿತ್ತು.

ಅಮ್ಮನ ಬುದ್ಧಿವಾದದ ನಂತರವೂ ಶಾಲೆಯಲ್ಲಿ ಇತರ ಮಕ್ಕಳು ಕುರುಡ ಎಂದು ಅಪಹಾಸ್ಯ ಮಾಡುವಾಗ ಬಹಳ ಸಿಟ್ಟು ಬರುತ್ತಿತ್ತು. ಅವರೊಡನೆ ಜಗಳ, ಕಾದಾಟ ಮುಂದುವರೆದಿತ್ತು. ಮತ್ತೆ ದುಃಖ, ಅಳು. ಮತ್ತೆ ಅಮ್ಮನ ಸಲಹೆಗಳು ಕಿವಿಯಲ್ಲಿ ಪಿಸುಗುಟ್ಟುವವು. ಸಹಪಾಠಿಗಳನ್ನು ಸ್ನೇಹಿತರನ್ನಾಗಿ ಮಾಡಿಕೊಳ್ಳುವ ಪ್ರಯತ್ನ ಮುಂದುವರೆಯುವುದು.

ಆ ಕಾಲದಲ್ಲಿ ಶಿಕ್ಷಕರಲ್ಲೂ ಅಂಧ ಮಕ್ಕಳನ್ನು ಕುರಿತು ಹೆಚ್ಚಿನ ಜಾಗೃತಿ ಮೂಡಿರಲಿಲ್ಲ. ಅವರು ಹೋಂವರ್ಕ್ ಮಾಡಿಲ್ಲ ಎಂದರೆ, ಭಾವೇಶ್‌ಗೆ ಇರುವ ತೊಂದರೆಯನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಿರಲಿಲ್ಲ. ಆ ಕ್ಷಣಕ್ಕೆ ಆತ ದಡ್ಡನೋ, ಸೋಮಾರಿಯೋ ಇರಬೇಕೆಂಬ ತೀರ್ಮಾನಕ್ಕೆ ತಲುಪುವರು. ಆಲಸಿ ಹುಡುಗರಿಗೆ ನೀಡುವ ಶಿಕ್ಷೆಯನ್ನೇ ಇವರಿಗೂ ವಿಧಿಸುವರು. ಪ್ರತಿ ಮೂರ್ನಾಲ್ಕು ದಿನಗಳಿಗೆ, ತಾಯಿಯನ್ನು ಶಾಲೆಗೆ ಕರೆಸುವರು. 'ನಿಮ್ಮ ಮಗ ಕಲಿಯಲಾರ' ಎಂದು ಮುಖಕ್ಕೆ ಹೇಳುವರು. ಆದರೆ ತಾಯಿ, ಗಟ್ಟಿ ಹೆಂಗಸು. ಆಕೆ ತನ್ನ ನಿರ್ಣಯದಲ್ಲಿ ದೃಢವಿದ್ದಳು; ತನ್ನ ಮಗ ಎಲ್ಲ ಸಾಧಾರಣ ಮಕ್ಕಳು ಕಲಿಯುವ ಶಾಲೆಯಲ್ಲಿಯೇ ಕಲಿಯಬೇಕು ಎನ್ನುವ ಆಕೆಯ ನಿರ್ಧಾರ ಬದಲಾಗಲಿಲ್ಲ. ಆಕೆಗೆ ಮಗನ ಬುದ್ಧಿವಂತಿಕೆಯ ಬಗ್ಗೆ ಸ್ವಲ್ಪವೂ ಅನುಮಾನವಿರಲಿಲ್ಲ. ಆಕೆಗೆ ಭಾವೇಶನ ಮೇಲೆ ಭರವಸೆ ಇತ್ತು. ಈ ಮಗು ಕಿವಿಗಳಲ್ಲಿ ಕೇಳಿದ್ದರಿಂದಲೇ ತನ್ನ ವಿದ್ಯಾಭ್ಯಾಸವನ್ನು ಪೂರ್ತಿ ಮಾಡುತ್ತಾನೆ ಎಂದು ಭದ್ರವಾಗಿ ನಂಬಿದ್ದಳು. ಸಮಯ ಸಿಕ್ಕಾಗಲೆಲ್ಲ ಅಮ್ಮ, ಪಾಠಗಳನ್ನು ಓದಿ ಹೇಳುವಳು. ಅಮ್ಮ ಭಾವೇಶ್‌ಗೆ ಬಹಳಷ್ಟು ಸಮಯ ನೀಡಲು ಬಯಸುವಳು. ಆದರೆ ಮನೆಯ ಕೆಲಸಗಳ ಹೊರೆ ಆಕೆಯ ಮೇಲಿತ್ತು. ಅದಲ್ಲದೆ ಮೂರೇ ವರ್ಷಕ್ಕೆ ದೊಡ್ಡವನಿದ್ದ ಜತಿನ್‌ನನ್ನೂ ನೋಡಿಕೊಳ್ಳಬೇಕಿತ್ತು.

ಅಧ್ಯಾಯ2

## ಸಾವು ಮುಟ್ಟಿದ ಮನೆ

ಭಾವೇಶನ ಅಣ್ಣ ಜತಿನ್ ಸದಾ ತನ್ನೊಳಗೇ ಕಳೆದುಹೋಗುತ್ತಿದ್ದ ಮಗು. ಆದರೆ ಅವನಿಗೆ ನಾಯಿಗಳೆಂದರೆ ವಿಶೇಷ ಪ್ರೀತಿ. ಬೀದಿ ನಾಯಿಗಳನ್ನೆಲ್ಲ ಮನೆಗೆ ತಂದು, ಅವುಗಳೊಡನೆ ಆಡುವ. ಅವುಗಳಿಗೆ ಊಟ ಹಾಕುವ, ಮುದ್ದಿಸುವ. ಅಮ್ಮನಿಗೆ ಇದು ಖಂಡಿತಕ್ಕೂ ಹಿಡಿಸುತ್ತಿರಲಿಲ್ಲ. ಅರಿಯದೆ ನಾಯಿ ಕಚ್ಚಿದರೇನು ಗತಿ ಎಂಬ ಭೀತಿ ಆಕೆಯದು. ಅಮ್ಮ ಎಷ್ಟೇ ಬೈದರೂ, ಜತಿನ್ ಕಿವಿಗೆ ಹಾಕಿಕೊಳ್ಳುತ್ತಿರಲಿಲ್ಲ.

ಅಮ್ಮನಿಗಿದ್ದ ಆತಂಕ ಸತ್ಯವಾಗಿತ್ತು. ಒಂದು ದಿನ ಜತಿನ್ ಇಂತಹ ಒಂದು ನಾಯಿಮರಿಯನ್ನು ಹಿಡಿದುಕೊಂಡು ಆಡುತ್ತಿದ್ದ. ಅದಕ್ಕೆಲ್ಲೋ ಹಿಂಸೆಯಾಗಿರಬೇಕು. ಅದು ತನ್ನ ಕಾಲಿನಿಂದ ಜತಿನ್‌ನ ಮುಖಕ್ಕೆ ಬಾರಿಸಿತ್ತು. ಕಾಲಿನ ಉಗುರುಗಳು ಜತಿನ್‌ನ ಕೆನ್ನೆಗಳ ಮೇಲೆ ಗಾಯ ಮಾಡಿತ್ತು. ಅಮ್ಮ ಆ ಗಾಯದ ಕಾರಣಕ್ಕೆ ಜತಿನ್ ಅನ್ನು ಆಸ್ಪತ್ರೆಗೆ ಧಾವಿಸಿ ಕರೆದೊಯ್ದಳು. ಭಾವೇಶ್‌ಗೆ ಅಷ್ಟೇ ನೆನಪು.

ಈ ಘಟನೆ ನಡೆದ ಕೆಲವು ದಿನಗಳ ನಂತರ ಇಡೀ ಕುಟುಂಬ ಬಾಂಬೆಗೆ ಹೊರಟಿತ್ತು. ಭಾವೇಶ್ ಅವರ ಓರ್ವ ಮಾಮನ ಮದುವೆ ಗೊತ್ತಾಗಿತ್ತು. ಘಾಟಕೊಪ್ಪರಿನ ಅಜ್ಜನ ಮನೆಯಲ್ಲಿ ಎಲ್ಲರೂ ಮದುವೆಯ ತಯಾರಿಯಲ್ಲಿ ವ್ಯಸ್ತರಾಗಿದ್ದರು. ಇಲ್ಲಿ ಜತಿನ್ ಅನ್ನು ಬಾಂಬೆಯ ಬೇರೆ ಬೇರೆ ಆಸ್ಪತ್ರೆಗಳಿಗೆ ಕರೆದೊಯ್ದು ತೋರಿಸಲಾಯಿತು.

ಒಂದು ದಿನ ಬೆಳಗ್ಗೆ ಅಮ್ಮನ ಜೋರು ಅಳುವಿನ ಸದ್ದು ಕೇಳಿ ಭಾವೇಶ್ ದಿಢೀರನೆ ಎದ್ದು ಕುಳಿತ. ಆಗ ಭಾವೇಶ್‌ಗೆ ಆರು ಅಥವಾ ಆರೂವರೆ ವರ್ಷ ವಯಸ್ಸು. ಅಮ್ಮ ಏಕೆ ಅಳುತ್ತಿದ್ದಾಳೆ ತಿಳಿಯದಾಗಿತ್ತು. ಕೆಲವರು ಹೇಳುತ್ತಿದ್ದರು, ಮದುವೆ ರದ್ದಾಗಿದೆ. ಆದದ್ದೇನು ಎಂದು ತಿಳಿಯಲು ಹೆಚ್ಚು ಸಮಯ ಹಿಡಿಸಲಿಲ್ಲ. ಆಂಬುಲೆನ್ಸ್ ಬಂದು ಮನೆಯ ಮುಂದೆ ನಿಂತಿತ್ತು. ಬಿಳಿಯ ಬಟ್ಟೆಯಲ್ಲಿ ಸುತ್ತಿಟ್ಟ ಜತಿನ್‌ನ ದೇಹವನ್ನು ಕೆಳಗಿಳಿಸಿದರು. ಪುಟ್ಟ ಜತಿನ್ ಸದಾ ಕಾಲಕ್ಕೂ ಕಳೆದು ಹೋಗಿದ್ದ. ಮಗುವಿನ ಕೆನ್ನೆಯ ಮೇಲೆ ಆದ ಗಾಯದಿಂದ, ಆತನ ಶರೀರ ಪೂರ್ತಿ ನಂಜು ಹರಡಿತ್ತು. ವೈದ್ಯರು ಎಷ್ಟೇ ಪ್ರಯತ್ನಿಸಿದರೂ, ಜತಿನ್ ಉಳಿದಿರಲಿಲ್ಲ.

ಭಾವೇಶ್ ದಿಗ್ಭ್ರಾಂತನಾಗಿ ಅಮ್ಮನ ಕರುಳು ಕತ್ತರಿಸುವ ರೋದನವನ್ನು ಕೇಳುತ್ತಿದ್ದ. ಭಾವೇಶ್ ಬಹಳ ಚಿಕ್ಕವನಿದ್ದ. ಅಣ್ಣನನ್ನು ಕಳೆದುಕೊಂಡ ದುಃಖದ ಆಳವನ್ನು ಅರಿಯುವ ವಯಸ್ಸು ಅದಾಗಿರಲಿಲ್ಲ. ಆದರೆ ಬೆಳೆದಂತೆ, ಅಣ್ಣನನ್ನು ಕಳೆದುಕೊಂಡ ಆ ಕ್ಷಣವನ್ನು ನೆನೆದಾಗ ದುಃಖ ಉಮ್ಮಳಿಸಿ ಬರುತ್ತಿತ್ತು. ಅಣ್ಣನೊಡನೆ ಬಾಲ್ಯದಲ್ಲಿ ಕಳೆದ ಆ ಕ್ಷಣಗಳ ಮಬ್ಬು ಮಬ್ಬು ನೆನಪುಗಳು ಆತನ ಹೃದಯದ ಯಾವುದೋ ಮೂಲೆಯಲ್ಲಿ ಜೀವಂತವಾಗಿ ಕಾಡುತ್ತಿದ್ದವು.

ಮಗನನ್ನು ಕಳೆದುಕೊಂಡ ಅಮ್ಮ ಮತ್ತು ಅಪ್ಪನನ್ನು ಸಮಾಧಾನ ಮಾಡುವುದು ಕಷ್ಟವಿತ್ತು. ಭಾವೇಶ್ ಜೊತೆಯಲ್ಲಿ ಅಪ್ಪ ಅಮ್ಮ ಕೆಲ ಸಮಯ ಘಾಟಕೊಪ್ಪರಿನಲ್ಲಿ ಅಜ್ಜನ ಮನೆಯಲ್ಲಿಯೇ ಉಳಿದರು. ಮುಂದಿನ 14 ದಿನ, ಅಜ್ಜನ ಇಡೀ ಪರಿವಾರ ರಾಜಾವಾಡೀ ಆಸ್ಪತ್ರೆಗೆ ಆಂಟಿ–ರೇಬೀಸ್ ಇಂಜೆಕ್ಷನ್ ತೆಗೆದುಕೊಳ್ಳಲು ಹೋಗತೊಡಗಿತು. ಆ ದಿನಗಳಲ್ಲಿ ಹೊಕ್ಕಳಿನ ಸುತ್ತ ಹದಿನಾಲ್ಕು ಇಂಜೆಕ್ಷನ್‌ಗಳನ್ನು ಕೊಡುತ್ತಿದ್ದರು. ಎಳೆಯ ಭಾವೇಶ್‌ಗೆ ಇಂಜೆಕ್ಷನ್ ಸಾಕಷ್ಟು ನೋವಿನದಾಗಿತ್ತು. ಆದರೆ ತಾಯಿಯದು ಎದೆಯ ಬಿರಿದ ನೋವು. ತನ್ನ ಕಂದಮ್ಮನನ್ನು ಕಳೆದುಕೊಂಡ ಮಾಯದ ಗಾಯ ಹೃದಯದ ಮೇಲೆ. ಜತಿನ್‌ನ ಸಾವು ತಾಯಿಯನ್ನು ಆಘಾತಗೊಳಿಸಿತ್ತು. ಆಕೆ ಸದಾ ಮೌನವಾಗಿ ಎಲ್ಲಿಯೋ ಕಳೆದುಹೋಗಿರುತ್ತಿದ್ದಳು.

* * *

ಕೆಲವು ದಿನಗಳ ನಂತರ ಕುಟುಂಬ ಗೋಂದಿಯಾಗೆ ಹಿಂತಿರುಗಿತು. ಎದೆಯ ಭಾರ ಇಳಿಯದು. ಬಂದು ಹೋಗುವ ಬಂಧುಮಿತ್ರರು ಅನೇಕರಿದ್ದರು. ಮತ್ತೆ ಮತ್ತೆ ರೋದಿಸುವ ಅಮ್ಮ. ಆಕೆಯ ಎದೆಯ ದುಃಖ ಆರದಾಗಿತ್ತು. ಈ ದಿನಗಳಲ್ಲಿ ತಂದೆ ತಾಯಿಯರ ಗಮನ ಭಾವೇಶ್ ನತ್ತ ತೀರಾ ಹೆಚ್ಚಾಗಿತ್ತು. ಈಗ ಉಳಿದವನು ಅವನೊಬ್ಬನೇ ಕಂದಮ್ಮ. ತಮ್ಮ ದುಃಖದ ಮಡುವಿನಲ್ಲಿ ಬೆಳಗಿರುವ ಏಕೈಕ ಆಶಾದೀಪ.

ಅಮ್ಮನಿಗೆ ಓರ್ವ 'ಮುಹ್ಬೋಲೆ' ಭಾಯಿ ಇದ್ದರು. ಆತನ ಪತ್ನಿ ಹೊಲಿಗೆ ತರಗತಿಗಳನ್ನು ನಡೆಸುತ್ತಿದ್ದರು. ಅಮ್ಮನನ್ನು ನೋವಿನ ಸಾಗರದಿಂದ ಹೊರಗೆಳೆಯಲು ಆ ಭಾಯಿ ತನ್ನ ಪತ್ನಿಯ ಹೊಲಿಗೆ ತರಗತಿಗೆ ತಾಯಿಯನ್ನು ಕರೆದೊಯ್ದರು. ಭಾವೇಶ್ ಕೂಡಾ ಕೆಲವೊಮ್ಮೆ ಆ ಹೊಲಿಗೆ ಕ್ಲಾಸುಗಳಿಗೆ ಅಮ್ಮನೊಡನೆ ಹೋಗತೊಡಗಿದ. ಹೊಲಿಗೆ ಕ್ಲಾಸ್ – ಅಲ್ಲೊಂದು ಪ್ರಪಂಚವಿತ್ತು. ಭಾವೇಶ್‌ನ ತುಡಿವ ಬೆರಳುಗಳಿಗೆ ಸೃಜನಶೀಲತೆಯ ಭಂಡಾರ ತೆರೆದಂತೆ ಭಾಸವಾಯಿತು. ಅಲ್ಲಿ ಮಾಮೀಜಿ ಬಟ್ಟೆ ಹೊಲೆಯುವುದನ್ನು ಹೇಳಿ ಕೊಡುವುದಲ್ಲದೆ, ಅನೇಕ ಕರಕುಶಲ ಕಲೆಗಳನ್ನು ಕಲಿಸುತ್ತಿದ್ದರು.

ಹಳೆಯ ಗ್ರಾಮೋಫೋನ್ ರೆಕಾರ್ಡ್‌ಗಳ ಮೇಲೆ ಮಣಿ, ಕಲ್ಲು ಅಥವಾ ಗಾಜಿನ ತುಂಡು ಗಳನ್ನು ಅಂಟಿಸಿ ಅನೇಕ ಚಂದದ ವಸ್ತುಗಳನ್ನು ತಯಾರಿಸುತ್ತಿದ್ದರು. ಅವುಗಳನ್ನು ಸ್ಪರ್ಶಿಸಿ ಆ ಆಕೃತಿಗಳನ್ನು ತಿಳಿದುಕೊಳ್ಳಲು ಭಾವೇಶ್ ಪ್ರಯತ್ನಿಸುತ್ತಿದ್ದ. ಅಲ್ಲಿ ಬಟ್ಟೆಯಿಂದ ಮಾಡಿದ ಬೊಂಬೆಗಳೂ ಇದ್ದವು. ಈ ಮೆದುವಾದ ಬೊಂಬೆಗಳನ್ನು ಮುಟ್ಟಿ ಮುಟ್ಟಿ ಭಾವೇಶ್ ನೋಡುತ್ತಿದ್ದ. ಅವು ತಯಾರಾಗುತ್ತಾ ಇರುವಂತೆ, ಮೆಲ್ಲನೆ ಪಡೆಯುತ್ತಿದ್ದ ರೂಪವನ್ನು ಸ್ಪರ್ಶಿಸುವಾಗ ಭಾವೇಶ್‌ಗೆ ಬೆರಗು ಸಂಭ್ರಮ.

ಮಾಮೀಜಿಯವರ ಆ ಹೊಲಿಗೆ ತರಗತಿಗಳು ಅಮ್ಮನಿಗೆ ಜತಿನ್‌ನ ಸಾವಿನ ತೀವ್ರ ನೋವಿನಿಂದ ಒಂದಿಷ್ಟು ಹೊರ ಬರಲು ಸಹಾಯ ಮಾಡಿತ್ತು. ಆಕೆಯ ಬೆರಳ ತುದಿಯ ಕಲೆಯನ್ನು ಹೊರ ಹೊಮ್ಮಿಸುವ ವರದಾನವಾಗಿತ್ತು. ಜೊತೆಯಲ್ಲಿ, ಭಾವೇಶ್‌ನ ಸೃಜನಶೀಲ ಮನಸ್ಸು ಜಾಗೃತವಾಗಲು ನೆರವಾಗಿತ್ತು. ಹೊಲಿಗೆ ಕ್ಲಾಸ್ ಭಾವೇಶ್‌ಗೆ ಪ್ರಿಯವಾಗಿತ್ತು. ಅನೇಕ ಬಾರಿ ಭಾವೇಶ್ 'ಇವತ್ತು ನಾನು ಶಾಲೆಗೆ ಹೋಗೋಲ್ಲ, ನಿನ್ನ ಜೊತೆ ಬರ್ತೀನೆ' ಎಂದು ಅಮ್ಮನ ಬಳಿ ಹಟ ಹಿಡಿಯುವ.

* * *